# ಏಸುಕ್ರಿಸ್ತನ ಬೋಧನೆಯ ಶೈಲಿ



ಸ್ವಾಮಿ ಪುರುಷೋತ್ತಮಾನಂದ

**ಬೆಳಗಾಂನಲ್ಲಿ ಇತ್ತೀಚೆಗೆ ಪ್ರಾರಂಭವಾಗಿರುವ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ಪುರುಷೋತ್ತಮಾನಂದಜಿಯವರು ಶ್ರೇಷ್ಠ ಬರಹಗಾರರು, ಉಪನ್ಯಾಸಕರು ಮತ್ತು ತಮ್ಮ ಸುಶ್ರಾವ್ಯ ಗಾಯಕರು. ಇಲ್ಲಿ ಏಸುಕ್ರಿಸ್ತನ ಕೆಲವು ಬೋಧನೆಗಳ ಮೂಲಕ ಆಧ್ಯಾತ್ಮಿಕ ಸಾಧನೆಗೆ ಮುಖ್ಯವಾಗಿ ಬೇಕಾದ ಮನಃಸ್ಥಿತಿಯನ್ನು ವಿವರಿಸಿರುವರು. ಕ್ರಿಸ್‌ಮಸ್ ಪ್ರಯುಕ್ತ ವಿಶೇಷ ಲೇಖನ ಇದು.**

ಶ್ರೀರಾಮಕೃಷ್ಣರು ಕ್ರೈಸ್ತಮತಕ್ಕನುಸಾರವಾಗಿ ಸಾಧನೆ ಮಾಡುತ್ತಿದ್ದ ಸಂದರ್ಭದಲ್ಲಿ ಏಸುಕ್ರಿಸ್ತನು ಅವರಿಗೆ ದರ್ಶನ ಕೊಟ್ಟು ಅವರೊಳಗೇ ಐಕ್ಯವಾದ ಘಟನೆಯೊಂದನ್ನು ಅವರ ಜೀವನಚರಿತ್ರೆಯಲ್ಲಿ ಕಾಣುತ್ತೇವೆ. ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಭಾರತದಾದ್ಯಂತ ಸಂಚರಿಸುತ್ತಿದ್ದಾಗ ಅವರು ಭಗವದ್ಗೀತೆಯ ಜೊತೆಯಲ್ಲಿ ಇಟ್ಟುಕೊಂಡಿದ್ದ ಮತ್ತೊಂದು ಪುಸ್ತಕವೇ *The Imitation of Christ*. ಒಮ್ಮೆ ಸ್ವಾಮಿ ವಿವೇಕಾನಂದರು ಭಕ್ತ್ಯಾವೇಶಭರಿತರಾಗಿ ಹೇಳುತ್ತಾರೆ : 'ಏಸುಕ್ರಿಸ್ತನು ಸಶರೀರಿಯಾಗಿದ್ದಾಗ ನಾನಿದ್ದಿದ್ದರೆ ನನ್ನ ಹೃದಯದ ರಕ್ತದಿಂದ ಅವನ ಪಾದಗಳನ್ನು ತೊಳೆಯುತ್ತಿದ್ದೆ.' ಇಂಥ ಕ್ರಿಸ್ತ ಕೋಟಿ ಕೋಟಿ ಜನರನ್ನು ತನ್ನೆಡೆಗೆ ಸೆಳೆದು ಅವರಿಗೆ ತನ್ನ ಪ್ರೀತಿಯನ್ನು ಸುರಿದು ಶಾಂತಿ-ಸಮಾಧಾನಗಳನ್ನು ಕರುಣಿಸುತ್ತಿದ್ದಾನೆ. ರಾಜ ಮಹಾರಾಜರುಗಳೆಲ್ಲ ಇತರರ ನೆತ್ತರನ್ನು ಹೊಳೆ ಹರಿಯಿಸಿ ಚಕ್ರಾಧಿಪತ್ಯ ನಡೆಸಿದರೆ, ಏಸುಕ್ರಿಸ್ತನು ಪ್ರೇಮಸುಧೆಯನ್ನು ಧಾರೆಯೆರೆದು ಧರೆಯನ್ನಾಳುತ್ತಿದ್ದಾನೆ. ಅವನು ತನ್ನ ಪ್ರೀತಿಯನ್ನು ನಮಗೆ ಮೂಲಧನವನ್ನಾಗಿ ಕೊಟ್ಟಿದ್ದಾನೆ. ಇದರೊಂದಿಗೆ ನಮ್ಮಲ್ಲಿ ವಿವೇಕವನ್ನು ಮೂಡಿಸುವಂತಹ ಹಾಗೂ ಜ್ಞಾನಜ್ಯೋತಿಯನ್ನು ಬೆಳಗಿಸುವಂತಹ ದಿವ್ಯ ಸಂದೇಶಗಳನ್ನು ನೀಡಿದ್ದಾನೆ.

ಅವನ ಸಂದೇಶಗಳೆಲ್ಲ ಅಮರವಾಣಿ. ಅವುಗಳಿಗೆ ನಾಶವೇ ಇಲ್ಲ. ಅವನೇ ಅದನ್ನು ತಿಳಿಸುತ್ತಾನೆ— **'ಸ್ವರ್ಗ, ಭೂಮಿ ಎಲ್ಲವೂ ನಾಶವಾಗಬಹುದು. ಆದರೆ ನನ್ನ ಮಾತು ಎಂದಿಗೂ ನಾಶವಾಗುವುದಿಲ್ಲ'**ಎಂದು. ಅದು ಯಾಕೆ ನಾಶವಾಗುವುದಿಲ್ಲ ಎಂಬುದಕ್ಕೂ ಅವನೇ ವಿವರಣೆ ಕೊಡುತ್ತಾನೆ: 'ನಾನು ನಾನಾಗಿಯೇ ಇವುಗಳನ್ನೆಲ್ಲ ಹೇಳುತ್ತಿಲ್ಲ. ನನ್ನನ್ನು ಈ ಭೂಮಿಗೆ ಕಳುಹಿಸಿದ ಸ್ವರ್ಗದಲ್ಲಿರುವ ನನ್ನ ತಂದೆಯೇ ಈ ಮಾತುಗಳನ್ನೆಲ್ಲ ನನ್ನ ಮೂಲಕ ಹೇಳಿಸುತ್ತಿದ್ದಾನೆ. ನಾನು ಇಲ್ಲಿ ಸಾರಬೇಕಾದ ಸಂದೇಶವನ್ನು ಸ್ವಯಂ ಅವನೆ ನನಗೆ ಹೇಳಿಕೊಟ್ಟಿದ್ದಾನೆ. ಆದ್ದರಿಂದಲೇ ಈ ಸಂದೇಶಗಳೆಲ್ಲ ನಾಶವಿಲ್ಲದವುಗಳು ಎಂದು ನನಗೆ ನಿಶ್ಚಯವಾಗಿ ತಿಳಿದಿದೆ.'

## ಕ್ರಿಸ್ತನ ವಾಣಿ

**ಅನೇಕರು ನನ್ನನ್ನು ತಮ್ಮ ತುಟಿಯಲ್ಲಿರಿಸಿಕೊಂಡಿದ್ದಾರೆ. ಆದರೆ ಎಲ್ಲೋ ಕೆಲವರು ಮಾತ್ರ ತಮ್ಮ ಹೃದಯದಲ್ಲಿ ಇರಿಸಿಕೊಂಡಿರುವರು.**

ಏಸುಕ್ರಿಸ್ತನು ತನ್ನ ಸಂದೇಶವನ್ನು ನಾನಾ ಬಗೆಯಿಂದ ಸಾರಿದ. ಅವುಗಳಲ್ಲಿ ದೃಷ್ಟಾಂತ ಕಥೆಗಳ ಮೂಲಕ ಅವನು ತನ್ನ ಸಂದೇಶವನ್ನು ಸಾರಿದ್ದು ಒಂದು ಬಗೆ. ಏಸುಕ್ರಿಸ್ತನ ಮಹಿಮೆ ಹರಡಿದಂತೆಲ್ಲ ಅವನ ಬಳಿಗೆ ನಾನಾ ನಗರಗಳಿಂದ ಜನ ಧಾವಿಸಿ ಬಂದರು. ಆ ಜನರಿಗೆಲ್ಲ ಅವನು ಬೋಧಿಸಿದ. ಆದರೆ ಹೇಗೆ ಬೋಧಿಸಿದ? ದೃಷ್ಟಾಂತ ಕಥೆಗಳ ಮೂಲಕ. ತತ್ತ್ವವನ್ನೇ ನೇರವಾಗಿ ಹೇಳಿದರೆ ಅದನ್ನು ಜನರು ಅರ್ಥಮಾಡಿಕೊಳ್ಳಲಾರರು ಎಂಬುದು ಅವನಿಗೆ ತಿಳಿದಿತ್ತು. ಆದ್ದರಿಂದ ಸರಳ ದೃಷ್ಟಾಂತಗಳ ಮೂಲಕವೇ ಅವರಿಗೆ ತತ್ತ್ವವನ್ನು ತಿಳಿಸಿಕೊಡುವ ಪ್ರಯತ್ನ ಮಾಡುತ್ತಾನೆ. ಒಮ್ಮೆ ಕ್ರಿಸ್ತ ಒಂದು ಕಥೆ ಹೇಳುತ್ತಾನೆ:

'ಒಂದು ಊರಿನಲ್ಲಿ ಒಬ್ಬ ಬಿತ್ತನೆಯವನು ಬೀಜ ಬಿತ್ತುತ್ತ ಹೊರಟ. ಅವುಗಳಲ್ಲಿ ಕೆಲವು ದಾರಿಯ ಪಕ್ಕದಲ್ಲಿ ಬಿದ್ದವು. ಇನ್ನು ಕೆಲವು ಕಲ್ಲುಪ್ರದೇಶದ ಮೇಲೆ ಬಿದ್ದವು. ಮತ್ತೆ ಕೆಲವು ಮುಳ್ಳುಗಿಡಗಳ ಬದಿಯಲ್ಲಿ ಬಿದ್ದವು. ಆದರೆ ಎಲ್ಲೋ ಕೆಲವು ಬೀಜಗಳು ಮಾತ್ರ ಒಳ್ಳೇ ಹಸನಾದ ಭೂಮಿಯ ಮೇಲೆ ಬಿದ್ದವು. ದಾರಿಯ ಪಕ್ಕದಲ್ಲಿ ಬಿದ್ದ ಬೀಜಗಳು ಗಿಡವಾಗಿ ಬೆಳೆಯುವ ಮಾತಂತಿರಲಿ, ಅವು ಮೊಳೆಯಲೇ ಇಲ್ಲ. ಏಕೆಂದರೆ ಅವುಗಳನ್ನೆಲ್ಲ ಹಕ್ಕಿಗಳು ಹೆಕ್ಕಿ ತಿಂದುಬಿಟ್ಟವು. ಇನ್ನು ಕಲ್ಲುಪ್ರದೇಶದಲ್ಲಿ ಬಿದ್ದ ಬೀಜಗಳಾದರೊ ಮೊಳೆತವು, ಆದರೆ ಮಳೆ ನಿಂತಾಗ ಕಲ್ಲುಪ್ರದೇಶ ಬಹಳ ಬೇಗ ಒಣಗಿತು. ತೇವವೆಲ್ಲ ಆರಿತು. ಮೊಳಕೆಗಳೆಲ್ಲ ಹಾಗೆ ಹಾಗೆಯೇ ಸೀದುಹೋದುವು. ಅಂತೆಯೇ ಮುಳ್ಳುಗಿಡಗಳ ಬದಿಯಲ್ಲಿ ಬಿದ್ದ ಬೀಜಗಳೂ ಫಲಕೊಡಲು ಸಾಧ್ಯವಾಗಲಿಲ್ಲ. ಬೀಜಗಳು ಮೊಳೆತು ಸಸಿಗಳು ಬೆಳೆಯುವ ವೇಳೆಗೆ ಆ ಮುಳ್ಳುಗಿಡಗಳೂ ಬೆಳೆದು ಸಸಿಗಳನ್ನು ಚುಚ್ಚಿ ಚುಚ್ಚಿ ನಾಶಪಡಿಸಿದುವು. ಆದರೆ ಒಳ್ಳೇ ಹಸನಾದ ಭೂಮಿಯ ಮೇಲೆ ಬಿದ್ದ ಬೀಜಗಳು ಮಾತ್ರ ಮೊಳೆತು, ಚೆನ್ನಾಗಿ ಬೆಳೆದು, ಸಮೃದ್ಧಿಯಾಗಿ ಫಲ ಕೊಟ್ಟವು. ಕಾರಣ, ನೆಲ ಚೆನ್ನಾಗಿತ್ತು, ಫಲವತ್ತಾಗಿತ್ತು, ತೇವ ಇತ್ತು, ಕಲ್ಲು ಮುಳ್ಳು ಕಳೆ ಇರಲಿಲ್ಲ. ಆದ್ದರಿಂದ ಆ ಬೀಜಗಳು ಫಲಪ್ರದವಾದುವು.' ಈ ಕಥೆಯನ್ನು ವರ್ಣಿಸಿದ ಬಳಿಕ ಏಸುಕ್ರಿಸ್ತ ಕೂಗಿ ಹೇಳುತ್ತಾನೆ—'ಯಾರಿಗೆ ಕೇಳುವ ಕಿವಿಗಳಿವೆಯೋ ಅವರು ಕೇಳಲಿ ಇದನ್ನು'ಎಂದು. ಆಗ ಅವನ



ದಿವ್ಯಚಿಂತನೆಯಲ್ಲಿ ಏಸುಕ್ರಿಸ್ತ

ಆಪ್ತಶಿಷ್ಯರು ಅವನನ್ನು ಕೇಳಿಕೊಳ್ಳುತ್ತಾರೆ—'ಈ ಕತೆಯ ಮರ್ಮವೇನು?' ಎಂದು. ಕ್ರಿಸ್ತ ಹೇಳುತ್ತಾನೆ, 'ನೀವೇನೂ ಯೋಚನೆ ಮಾಡಬೇಕಾಗಿಲ್ಲ; ನಿಮಗೆಲ್ಲ ಆ ಭಗವದ್ರಹಸ್ಯವನ್ನು ನೇರವಾಗಿ ತಿಳಿಸಿಕೊಡಲಾಗುತ್ತದೆ. ಆದರೆ ಇತರರಿಗೆ ನಾನು ದೃಷ್ಟಾಂತ ಕತೆಗಳ ಮೂಲಕವೇ ತಿಳಿಸಬೇಕಾಗಿದೆ. ಏಕೆಂದರೆ ಅವರೆಲ್ಲ ಕಣ್ಣಿದ್ದೂ ಕಾಣಲಾರದವರು, ಕಿವಿಯಿದ್ದೂ ಕೇಳಲಾರದವರು, ಕೇಳಿದರೂ ಅರಿಯಲಾರದವರು.' ಈ ಮಾತು ಅದೆಷ್ಟು ಸತ್ಯ! ಈ ದೃಷ್ಟಾಂತ ಕಥೆ ಕೇಳುವುದಕ್ಕೇನೋ ಬಹಳ ಸರಳವಾಗಿದ್ದರೂ ಅದರ ಒಳ ಅರ್ಥ ನಮಗೆ ಸುಲಭವಾಗಿ ಗೋಚರಿಸುವುದಿಲ್ಲ. ಈ ಕತೆ ಒಂದು ಒಗಟಾಗಿ ಕಾಣುತ್ತದೆ ನಮಗೆ. ಆದ್ದರಿಂದ ಕ್ರಿಸ್ತನೇ ಈ ಒಗಟನ್ನು ಬಿಡಿಸಿ ಕತೆಯ ಅಂತರಾರ್ಥವನ್ನು ವಿವರಿಸುತ್ತಾನೆ.

ಕತೆಯಲ್ಲಿ ಬರುವ ಬೀಜವೇ ಭಗವನ್ನಾಮ. ಬಿತ್ತನೆಯವನು ಬಿತ್ತುತ್ತ ಹೊರಟದ್ದು ಭಗವನ್ನಾಮದ ಬೀಜವನ್ನು!

ದಾರಿಯ ಬದಿಯಲ್ಲಿ ಬಿದ್ದ ಬೀಜಗಳನ್ನು ಹಕ್ಕಿಗಳು ತಿಂದು ಬಿಟ್ಟವು ಎಂಬುದರ ಅರ್ಥ ಇದು : ಭಗವನ್ನಾಮವನ್ನು ಉಪದೇಶವಾಗಿ ಪಡೆದು ಕೊಂಡವರಲ್ಲಿ ಕೆಲವರು ಅದನ್ನು ಸುಮ್ಮನೆ ಕಿವಿಯ ಮೇಲೆ ಹಾಕಿಕೊಳ್ಳುವುದೆಷ್ಟೋ ಅಷ್ಟೆ. ಅದು ಅವರ ಹೃದಯದ ಆಳಕ್ಕೆ ಇಳಿಯುವುದೇ ಇಲ್ಲ. ಏಕೆಂದರೆ ಅಷ್ಟೊತ್ತಿಗಾಗಲೇ ಅವರ ಹೃದಯದೊಳಗೆ ಸೈತಾನ, (ಎಂದರೆ ಕಾಮಕ್ರೋಧಾದಿಗಳೆಂಬ ಹಕ್ಕಿಗಳು) ಪ್ರವೇಶಮಾಡಿ ಆ ಭಗವನ್ನಾಮವನ್ನು ಅಪಹರಿಸಿಕೊಂಡು ಹೋಗಿಬಿಟ್ಟಿರುತ್ತವೆ. ಈ ಸೈತಾನನ ದುರುದ್ದೇಶವೇನೆಂದರೆ, ಮನುಷ್ಯ ಭಗವನ್ನಾಮದಲ್ಲಿ ಭರವಸೆ ಇಡದಂತೆ ಆಗಲಿ, ಅವನು ಉದ್ಧಾರ ಆಗದಿರಲಿ ಎಂಬುದು.

ಇನ್ನು ಕೆಲವು ಬೀಜಗಳು ಕಲ್ಲುಪ್ರದೇಶದಲ್ಲಿ ಬಿದ್ದದ್ದರಿಂದ ಅವು ಬೆಳೆದು ಫಲ ಕೊಡಲಾಗಲಿಲ್ಲ ಎಂಬುದರ ಇಂಗಿತವನ್ನು ಹೀಗೆ ವಿವರಿಸುತ್ತಾನೆ ಕ್ರಿಸ್ತ : ಕೆಲವರು ಭಗವನ್ನಾಮವನ್ನು ಉಪದೇಶವಾಗಿ ಪಡೆಯುತ್ತಾರೆ, ಪಡೆದು ಕೆಲವು ದಿನಗಳ ತನಕ ಉತ್ಸಾಹಭರಿತರಾಗಿ ಜಪವನ್ನೂ ಮಾಡುತ್ತಾರೆ. ಆದರೆ ಇವರ ಪ್ರಯತ್ನವೆಲ್ಲ ಕೆಲವೇ ದಿನಗಳಲ್ಲಿ ನಿಂತುಹೋಗುತ್ತದೆ. ಏಕೆಂದರೆ ಪ್ರಪಂಚದ ಪ್ರಲೋಭನೆಗೆ ಇವರ ಮನಸ್ಸು ಒಳಗಾಗಿಬಿಡುತ್ತದೆ. ಆಗ ಮನದೊಳಗಿನ ಭಗವನ್ನಾಮ ಹೊರಗಾಗಿಬಿಡುತ್ತದೆ. ಹೇಗೆ ಕಲ್ಲುಪ್ರದೇಶದಲ್ಲಿ ಬಿದ್ದ ಬೀಜ ಮೊಳಕೆ ಬಂದರೂ ಅದಕ್ಕೆ ಬೇರುಬಿಡುವುದಕ್ಕಾಗಲಿಲ್ಲವೋ ಮತ್ತು ತೇವವೆಲ್ಲ ಆರಿದಾಗ ಆ ಮೊಳಕೆಗಳು ಹೇಗೆ ಸೀದುಹೋದವೋ ಹಾಗೆಯೇ ಕಲ್ಲು ಚಪ್ಪಡಿಯಂತಹ ಮನಸ್ಸಿನವರಲ್ಲಿ ಭಗವನ್ನಾಮ ಎಂಬ ಬೀಜ ಕಿಂಚಿತ್ ಮೊಳೆತರೂ ವಿಷಯಸುಖದ ಬೇಗೆಯಲ್ಲಿ ಬೇಗ ಸೀದುಹೋಗುತ್ತದೆ.

ಮುಳ್ಳುಗಿಡಗಳ ಬಳಿ ಬಿದ್ದ ಬೀಜಗಳು ಚಿಂತೆಗಳಿಗೆ ಬಲಿಯಾದವರನ್ನು ಸೂಚಿಸುತ್ತದೆ. ಭಗವನ್ನಾಮವನ್ನು ಪಡೆದು ಸಾಧನೆಯಲ್ಲಿ ತೊಡಗಿದವರಲ್ಲಿ ಕೆಲವರಿಗೆ ಮಧ್ಯೆ ಇದ್ದಕ್ಕಿದ್ದಂತೆ ಯೋಗಕ್ಷೇಮದ ಚಿಂತೆ, ಸಂಪತ್ತಿನ ರಕ್ಷಣೆಯ ಚಿಂತೆ, ಸಂಪತ್ತನ್ನು ಬಳಸಿಕೊಂಡು ಸುಖಿಸುವ ಚಿಂತೆ, ಹೀಗೆ ಇನ್ನೂ ನೂರಾರು ಚಿಂತೆಗಳು ಬಂದು ಮುತ್ತಿಕೊಳ್ಳುತ್ತವೆ. ಮುಳ್ಳುಗಿಡಗಳು ಸಸಿಗಳನ್ನು ಮುತ್ತಿಕೊಂಡು ಅವುಗಳ ಬೆಳವಣಿಗೆಯನ್ನು ಕುಂಠಿತಗೊಳಿಸಿದಂತೆ, ಈ ಚಿಂತೆಗಳು ಅವರ ಮನಸ್ಸನ್ನು ಮುತ್ತಿಕೊಂಡು ಭಗವನ್ನಾಮವನ್ನು ಹೃತ್ಪೂರ್ವಕವಾಗಿ ಜಪಿಸುವುದಕ್ಕೇ ಬಿಡುವುದಿಲ್ಲ. ಹೀಗಾಗಿ ಆಧ್ಯಾತ್ಮಿಕತೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸಲು ಅವರಿಗೂ ಸಾಧ್ಯವಾಗುವುದಿಲ್ಲ, ಎನ್ನುತ್ತಾನೆ ಕ್ರಿಸ್ತ.

**ಆದರೆ ಪ್ರಾಮಾಣಿಕನಾದ ಉತ್ತಮ ಮನುಷ್ಯ ಪಡೆದ ಭಗವನ್ನಾಮವಾದರೊ ಹಸನಾದ, ಫಲವತ್ತಾದ ಭೂಮಿಯಲ್ಲಿ ಬಿದ್ದ ಬೀಜಗಳಂತೆ ಎನ್ನುತ್ತಾನೆ ಕ್ರಿಸ್ತ. ಪ್ರಾಮಾಣಿಕನೂ ಸಾತ್ತ್ವಿಕನೂ ಆದ ಮನುಷ್ಯನ ಹೃದಯ ಫಲವತ್ತಾದ ಹೊಲವಿದ್ದಂತೆ. ಫಲವತ್ತಾದ ಹೊಲದಲ್ಲಿ ಬಿದ್ದ ಬೀಜ ಸರಿಯಾಗಿ ಮೊಳೆತು, ಬೆಳೆದು, ಬಲಿತು ಸಮೃದ್ಧಿಯಾಗಿ ಫಲ ಕೊಡುವಂತೆ ಉತ್ತಮ ಮನುಷ್ಯನಲ್ಲಿ ಭಗವನ್ನಾಮ ತನ್ನ ಪರಿಣಾಮವನ್ನು ಬೀರಲಾರಂಭಿಸುತ್ತದೆ.** ಈ ಕಥೆ ಎಷ್ಟು ಅರ್ಥಪೂರ್ಣವಾಗಿದೆ! ಕ್ರಿಸ್ತನಿಗೆ ಜನರ ಮನಸ್ಸಿನ ಸ್ಥಿತಿಗತಿಯ ಬಗ್ಗೆ ಎಷ್ಟು ಸ್ಪಷ್ಟವಾದ ಅಭಿಪ್ರಾಯವಿದೆ!

ಕ್ರಿಸ್ತ ತನ್ನ ಆಪ್ತ ಶಿಷ್ಯರಿಗೆ ಹೇಳುತ್ತಾನೆ—'ಟೊಂಕಕಟ್ಟಿ ನಿಲ್ಲಿ, ಸಿದ್ಧರಾಗಿ, ನಿಮ್ಮ ದೀಪ ಉರಿಯುತ್ತಿರಲಿ. ಮದುವೆಯ ಸಮಾರಂಭಕ್ಕೆ ಹೋದ ಮನೆಯ ಯಜಮಾನ ಹಿಂದಿರುಗಿ ಬರುವುದನ್ನೇ ಕಾಯುತ್ತ ಕುಳಿತ ಮನೆಯ ಆಳುಗಳಂತೆ ಇರಿ.'

ಮನೆಯ ಯಜಮಾನ ಎಷ್ಟು ಹೊತ್ತಿಗೆ ಹಿಂತಿರುಗುವನೊ ತಿಳಿಯದು. ಆದರೂ ಸೇವಕರು ಮಾತ್ರ ಅವನಿಗಾಗಿ ಕಾದು ಕುಳಿತಿರಬೇಕು, ದೀಪ ಉರಿಸಿಕೊಂಡು ಕುಳಿತಿರಬೇಕು, ಅವನ ಸೇವೆಗಾಗಿ ಟೊಂಕಕಟ್ಟಿ ಕುಳಿತಿರಬೇಕು. ಆಗ ಮನೆಗೆ ಹಿಂದಿರುಗಿದ ಯಜಮಾನ,ಸೇವಕರು ತನ್ನ ಬರವನ್ನೇ ನಿರೀಕ್ಷಿಸುತ್ತ ಸೇವೆಗೆ

ಸಿದ್ಧರಾಗಿ ಕುಳಿತಿರುವುದನ್ನು ಕಂಡು ಬಹಳ ಸಂತುಷ್ಟನಾಗುತ್ತಾನೆ. ಅವರನ್ನೆಲ್ಲ ಊಟಕ್ಕೆ ಕುಳ್ಳಿರಿಸಿ ತಾನೇ ಅವರಿಗೆಲ್ಲ ಪ್ರೀತಿಯಿಂದ ಉಣಬಡಿಸುತ್ತಾನೆ, ಎನ್ನುತ್ತಾನೆ ಕ್ರಿಸ್ತ. ಈ ಮಾತುಗಳೆಲ್ಲ ಎಷ್ಟು ಮಾರ್ಮಿಕ! ಯಾಕೆ ಸದಾ ಭಗವಂತನ ಸ್ಮರಣೆಯಲ್ಲೇ ತತ್ಪರರಾಗಿರಬೇಕು ಎಂಬುದಕ್ಕೆ ಈ ಉದಾಹರಣೆ ಎಷ್ಟು ಸಮಂಜಸವಾಗಿದೆ! ಕ್ರಿಸ್ತ ತನ್ನ ಮಾತನ್ನು ಮುಂದುವರಿಸುತ್ತ ತನ್ನ ಶಿಷ್ಯರಿಗೆ ಮತ್ತೆ ಹೇಳುತ್ತಾನೆ: 'ಆದ್ದರಿಂದ ನೀವೂ ಕೂಡ ಯಾವಾಗಲೂ ಭಗವಂತನ ಆಗಮನವನ್ನೇ ನಿರೀಕ್ಷಿಸುತ್ತಿರಿ. ಸದಾ ಎಚ್ಚರದ ಮನಸ್ಸಿನಿಂದ ಕಾಯುತ್ತಿರಿ. ಏಕೆಂದರೆ ಭಗವಂತ ಯಾವ ಗಳಿಗೆಯಲ್ಲಿ ನಿಮ್ಮ ಬಳಿಗೆ ಬರುತ್ತಾನೆ ಎಂಬುದನ್ನು ಹೇಳಲಾಗುವುದಿಲ್ಲ. ಅವನು ಬಂದಾಗ ನಿಮ್ಮ ಮನಸ್ಸು ಮತ್ತೆಲ್ಲಿಗೋ ಹೋಗಿರಬಾರದು.'

ನಿಜ, ನಮ್ಮ ಮನಸ್ಸು ಯಾವಾಗಲೂ ಒಂದಲ್ಲ ಒಂದು ಕಾಮನೆಯಿಂದ ಕೂಡಿರುತ್ತದೆ, ಒಂದಲ್ಲ ಒಂದು ಪ್ರಲೋಭನೆಗೆ ಗುರಿಯಾಗುತ್ತಿರುತ್ತದೆ, ಮತ್ತು ಅರೆನಿದ್ರೆಯ ಸ್ಥಿತಿಯಲ್ಲಿರುತ್ತದೆ. ಇಂಥ ಮನಸ್ಸಿನಿಂದ ನಾವು ಭಗವಂತನನ್ನು ನಿರಂತರ ಸ್ಮರಿಸುವುದಾದರೂ ಹೇಗೆ? ನಾಮಜಪ ಮಾಡುವುದಾದರೂ ಹೇಗೆ? ಇದಕ್ಕೆ ಕ್ರಿಸ್ತನೇ ಒಂದು ಉಪಾಯವನ್ನು ಹೇಳಿಕೊಡುತ್ತಾನೆ. 'ಭಗವಂತ ಈಗಲೇ ಬರುತ್ತಾನೆ, ಇಗೊ ಈ ಕ್ಷಣದಲ್ಲೆ ಬರುತ್ತಾನೆ, ಇನ್ನೇನು ಬಂದುಬಿಡುತ್ತಾನೆ' ಎಂಬ ಭಾವದಿಂದ ನಿರೀಕ್ಷಿಸುತ್ತಿರಬೇಕಂತೆ. 'ನನ್ನ ಪರಮಪ್ರೀತಿಯ ಭಗವಂತ ಬಂದಾಗ ನಾನು ಅವನನ್ನು ಪರಮ ಪ್ರೇಮದಿಂದ ಬರಮಾಡಿಕೊಳ್ಳಬೇಕು, ಅತ್ಯಂತ ಆದರದಿಂದ ಸತ್ಕರಿಸಬೇಕು' ಎಂಬ ವ್ಯಾಕುಲತೆಯಿಂದ ಕಾದಿರಬೇಕಂತೆ. ಸದಾ ಆಸೆಗಳ ಬಲೆಗೆ ಬಲಿಬೀಳುವ ನಮ್ಮ ಚಂಚಲ ಮನಸ್ಸನ್ನು ಭಗವಚ್ಚಿಂತನೆಯಲ್ಲೆ ಹಿಡಿದು ನಿಲ್ಲಿಸಲು ಈ ಉಪಾಯ ಎಷ್ಟು ಶಕ್ತಿಯುತವಾಗಿದೆ! ಪರಮ ಕರುಣಾಮಯನಾದ ಪರಮಾತ್ಮ ನಮಗೆ ಒಲಿಯಲು ಸದಾ ಕಾತರನಾಗಿದ್ದಾನೆ. ಆದರೆ ಅವನ ಕೃಪೆಯನ್ನು ದಕ್ಕಿಸಿಕೊಳ್ಳಲು ನಾವೇ ಇನ್ನೂ ಸಿದ್ಧರಾಗಿಲ್ಲ, ಅಷ್ಟೆ.

ಕಾಮನೆಗಳಂತೆ ಮನುಷ್ಯನನ್ನು ಕಾಡುವ ಮತ್ತೊಂದು ವೈರಿಯೇ ಲೋಭ! ಈ ಲೋಭ ಮನುಷ್ಯನ ಶಕ್ತಿ-ಆಯುಷ್ಯಗಳನ್ನೆಲ್ಲ ಹಿಂಡಿ ಹೀರಿಬಿಡುತ್ತದೆ. ಅದರ ಕುರಿತಾಗಿ ಕ್ರಿಸ್ತ ಹೇಳುವ ಒಂದು ಕತೆ ಸ್ವಾರಸ್ಯಕರವಾಗಿದೆ :

ಒಬ್ಬ ಶ್ರೀಮಂತ ಇದ್ದ. ಆ ವರ್ಷ ಅವನ ಜಮೀನಿನಲ್ಲಿ ಸಮೃದ್ಧಿಯಾಗಿ ಬೆಳೆಯಾಗಿತ್ತು. ಶ್ರೀಮಂತ ಆಲೋಚಿಸಿದ: 'ಅಲ್ಲ, ಈ ವರ್ಷ ಇಷ್ಟೊಂದು ಬೆಳೆಯಾಗಿದೆಯಲ್ಲ. ಇಷ್ಟೊಂದು ಫಸಲನ್ನು ಏನು ಮಾಡುವುದು, ಇವುಗಳನ್ನೆಲ್ಲ ಎಲ್ಲಿ ಕೂಡಿಡುವುದು' ಎಂದು. ಕಡೆಗೆ ಒಂದು ಉಪಾಯ ಹೂಡಿದ : 'ಸರಿ, ಹೀಗೆ ಮಾಡುತ್ತೇನೆ. ಈಗಿರುವ ಕಣಜವನ್ನು ಒಡೆದು ಇನ್ನೂ ವಿಶಾಲವಾದ ಕಣಜ ಕಟ್ಟುತ್ತೇನೆ. ಅದರೊಳಗೆ ನನ್ನ ಎಲ್ಲ ಫಸಲನ್ನೂ ಎಲ್ಲ ದವಸ ಧಾನ್ಯಗಳನ್ನೂ ಕೂಡಿಡುತ್ತೇನೆ.' ಹೀಗೆ ವಿಚಾರ ಮಾಡುತ್ತ ತನಗೆ ತಾನೇ ಹೇಳಿಕೊಂಡನಂತೆ : 'ಏನಪ್ಪಾ, ಇನ್ನೇನು ಕೊರತೆ ನಿನಗೆ! ಬೇಕಾದಷ್ಟು ತುಂಬಿಟ್ಟುಕೊಂಡಿರುವೆಯಲ್ಲ. ಚೆನ್ನಾಗಿ ತಿಂದು, ಕುಡಿದು

**ಪ್ರಾಪಂಚಿಕ ವಸ್ತುಗಳು ನಿಮ್ಮ ಬಳಕೆಗೆ ಮಾತ್ರವಿರಲಿ ; ಆಧ್ಯಾತ್ಮಿಕ ವಿಷಯಗಳಲ್ಲಿ ಆಸೆಯಿರಲಿ.**

—*The Imitation of Christ*

ಆರಾಮವಾಗಿರು, ಸಂಭ್ರಮದಿಂದಿದ್ದುಬಿಡು' ಎಂದು. ಆದರೆ ಆ ಕ್ಷಣದಲ್ಲಿ ದೇವರು ಹೇಳುತ್ತಾನಂತೆ, 'ಅಯ್ಯೋ, ಮೂರ್ಖ, ಈ ರಾತ್ರಿಯೇ ನೀನು ನಿನ್ನ ಶರೀರ ಬಿಡಬೇಕಾಗಿದೆಯಲ್ಲ! ಹೀಗಿರುವಾಗ ನೀನಿಷ್ಟೊಂದು ಕೂಡಿಡುತ್ತಿರುವುದು ಯಾರಿಗಾಗಿ?' ಎಂದು.

ಈ ದೃಷ್ಟಾಂತ ಕತೆಯನ್ನು ಹೇಳಿದ ನಂತರ ಕ್ರಿಸ್ತ ಅದರ ಸಾರಾಂಶವನ್ನು ಹೇಳುತ್ತಾನೆ : 'ಯಾರು ತನಗಾಗಿ ಸಂಪತ್ತನ್ನು ಕೂಡಿಡುತ್ತಾನೊ ಅವನು ಭಗವದ್ವಿಚಾರದಲ್ಲಿ ದರಿದ್ರ. ಅವನು ಲೌಕಿಕವಾಗಿ ಸಿರಿವಂತನಾದರೂ ಆಧ್ಯಾತ್ಮಿಕವಾಗಿ ಅವನೊಬ್ಬ ಬಡವನೇ ಸರಿ' ಎಂದು. ನಿಜಕ್ಕೂ ಈ ಸಂಪತ್ತಿನ ಚಿಂತೆ ಆಧ್ಯಾತ್ಮಿಕ ಸಿದ್ಧಿಗೆ ಒಂದು ಕಂಟಕವಿದ್ದಂತೆ. ಹೇಗೆ ಸಸಿಯನ್ನು ಮುಳ್ಳಿನ ಗಿಡಗಳು ಬೆಳೆಯಗೊಡುವುದಿಲ್ಲವೊ ಅಂತೆಯೆ ಸಂಪತ್ತಿನ ಚಿಂತೆ ಆಧ್ಯಾತ್ಮಿಕ ವಿಕಾಸಕ್ಕೆ ಮಾರಿ. ಆದ್ದರಿಂದ ಕ್ರಿಸ್ತ ತನ್ನ ಶಿಷ್ಯರಿಗೆ ಒಂದು ಸೂಚನೆ ಕೊಡುತ್ತಾನೆ: 'ನೀವು ಈ ಅತ್ಯಾಸೆಯ ವಿಚಾರದಲ್ಲಿ ತುಂಬ ಜಾಗರೂಕರಾಗಿರಬೇಕು. ಏಕೆಂದರೆ ಮನುಷ್ಯನ ವ್ಯಕ್ತಿತ್ವದ ಘನತೆ ಇರುವುದು ಸಮೃದ್ಧಿಯಾದ ಸಂಪತ್ತಿನಲ್ಲಿ ಅಲ್ಲ, ಬದಲಾಗಿ ಅವನ ದಿವ್ಯಗುಣಗಳಲ್ಲಿ.'

ಮನುಷ್ಯನ ಹೃದಯದಲ್ಲಿರುವ ಆಧ್ಯಾತ್ಮಿಕ ಸಂಪತ್ತನ್ನು ಅಪಹರಿಸಿ ಅವನನ್ನು ಅಧೋಗತಿಗೆ ತಳ್ಳುವ ಎರಡು ಪ್ರಬಲ ವೈರಿಗಳೆಂದರೆ ಕಾಮ-ಕಾಂಚನ. ಕಾಮ-ಕಾಂಚನಗಳ ಮೇಲಿನ ಆಸಕ್ತಿ-ಮೋಹ-ಅತ್ಯಾಸೆಗಳನ್ನು ತೊರೆದಾಗ ಮನುಷ್ಯ ಮಗುವಿನಂತೆ ಶುದ್ಧನಾಗುತ್ತಾನೆ, ಮುಗ್ಧನಾಗುತ್ತಾನೆ, ಸರಳನಾಗುತ್ತಾನೆ. ಮಕ್ಕಳ ಮನಸ್ಸು ಶುದ್ಧ, ಸರಳ, ಮುಗ್ಧ. ಇಂತಹ ಮುಗ್ಧ ಮಕ್ಕಳನ್ನು ಏಸುಕ್ರಿಸ್ತ ಬಹಳವಾಗಿ ಪ್ರೀತಿಸುತ್ತಿದ್ದ. ಒಂದು ದಿನ ಅವನು ಭಕ್ತ ಜನರಿಗೆ ಹೇಳುತ್ತಾನೆ : 'ಯಾವ ಮಕ್ಕಳು ನನ್ನ ಬಳಿಗೆ ಬರಬೇಕೆಂದು ಹಾತೊರೆಯುತ್ತವೆಯೋ ಅವುಗಳೆಲ್ಲ ಬರಲಿ ಬಿಡಿ, ಅವುಗಳನ್ನು ತಡೆಯಬೇಡಿ. ಏಕೆಂದರೆ ಭಗವಂತನ ರಾಜ್ಯ ಇಂಥವರಿಂದಲೇ ಆಗಿದೆ. ಅಲ್ಲಿ ಚಾಣಾಕ್ಷತನದಿಂದ ವ್ಯವಹರಿಸಬಲ್ಲ ಬುದ್ಧಿವಂತರಿಗೆಲ್ಲ ಸ್ಥಾನವಿಲ್ಲ. ಮುಗ್ಧ ಶಿಶುವಿನಂತಹ ಸರಳ-ಶುದ್ಧ ಹೃದಯಿಗಳಿಗೆ ಮಾತ್ರವೇ ಮೀಸಲಾದ ದಿವ್ಯಮಧುರ ತಾಣ ಅದು.'

ಹೀಗೆ, ಮನಸ್ಸಿನ ಕಪಟತನವನ್ನು ಬಿಟ್ಟು, ಅತ್ಯಾಸೆಯನ್ನು ತೊರೆದು, ಲಂಪಟತನವನ್ನು ತ್ಯಜಿಸಿ ಶುದ್ಧ, ನಿಷ್ಕಲ್ಮಷ ಬಾಲಕರಂತೆ ಆದಾಗ ಭಗವಂತ ನಮ್ಮನ್ನು ತನ್ನ ಮಡಿಲಲ್ಲಿ ಎತ್ತಿಕೊಳ್ಳುತ್ತಾನೆ, ಪರಮಾನಂದವನ್ನು ಕರುಣಿಸುತ್ತಾನೆ ಎಂಬುದು ಏಸುಕ್ರಿಸ್ತನ ಬೋಧನೆಯ ಸಾರ.